# ಸರೋದ್ ಸರೋವರದ ಸೌಗಂಧಿಕಾ ಪುಷ್ಪ




**ಶೈಲಜಾ ಮತ್ತು ವೇಣುಗೋಪಾಲ್**

ರಾಯಚೂರು ಜಿಲ್ಲೆಯ ತುಂಗಭದ್ರಾ ಗ್ರಾಮದ 'ಪ್ರೇಮಾಯತನ'ದ ರಾಜೀವ ತಾರಾನಾಥರು (ಅ. 17, 1932 – ಜೂನ್ 11, 2024) ಸರೋದ್ ಮೂಲಕ ವಿಶ್ವದ ಮೂಲೆ ಮೂಲೆಗಳ ಸಂಗೀತಪ್ರಿಯರನ್ನು ತಲುಪಿದ್ದು ಭಾರತೀಯ ಸಂಗೀತದ ಅದ್ಭುತಗಳಲ್ಲೊಂದು. ಸಂಗೀತ ಮಾತ್ರವಲ್ಲ, ರಾಜೀವರ ಸಾಹಿತ್ಯದ ಅಭಿರುಚಿಯೂ ಘನವಾದುದು. ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದವರು ಸ್ವರಗಳ ಬೆನ್ನುಹತ್ತಿ ಸಂಗೀತ ವಿದ್ವಾಂಸರೆನ್ನಿಸಿಕೊಂಡರು. ಕ್ಯಾಲಿಫೋರ್ನಿಯಾ ಕಲಾವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸಿದ್ದರು. ಭಾರತೀಯ ಸಂಗೀತ ಹಾಗೂ ಕನ್ನಡ ಸಂಸ್ಕೃತಿಯ ಪ್ರತಿನಿಧಿಯಾಗಿದ್ದ ಸರೋದ್ ಸಾಮ್ರಾಟನ ನೆನಪುಗಳು.

ಅಸಾಧ್ಯ ಪ್ರತಿಭಾವಂತರೂ, ಲೋಕವಿಖ್ಯಾತರೂ ಆಗಿರುವವರ ಮಗನಾಗಿ ಹುಟ್ಟಿ ಬಾಳುವುದು ಸುಲಭವಲ್ಲ. ತಂದೆ ಲೋಕವಿಖ್ಯಾತ ಪಂಡಿತ ತಾರಾನಾಥರು. ಒಂದು ಇಡೀ ತಲೆಮಾರನ್ನು ತಮ್ಮ ಅಗಾಧ ಪ್ರತಿಭೆಯಿಂದ ಬೆರಗುಗೊಳಿಸಿದವರು. ತಾಯಿ ಸುಮತೀಬಾಯಿ 1925ರಷ್ಟು ಹಿಂದೆಯೇ ಮಹಿಳಾ ಹಕ್ಕುಗಳನ್ನು ಪ್ರತಿಪಾದಿಸಿ, ಪಂಡಿತ್ ನೆಹರೂ ಅಂತಹವರ ಮೆಚ್ಚುಗೆ ಗಳಿಸಿದವರು. ಇಂತಹವರ ಮಗನಾಗಿ ಸಾಧ್ಯವಿರುವುದು ಎರಡೇ ಆಯ್ಕೆ. ಅವರ ಅಗಾಧ ಪ್ರಭೆಯಲ್ಲಿ, ಅದರ ನೆರಳಿನಲ್ಲಿ, ಅವರ ಅಸ್ಮಿತೆಯಲ್ಲಿ ಕರಗಿಹೋಗುವುದು. ಇಲ್ಲವೇ ಅವರನ್ನು ಪ್ರೀತಿಸುತ್ತಾ, ಅನುಕರಿಸುತ್ತಾ, ಪ್ರಶ್ನಿಸುತ್ತಾ, ಹೋರಾಡುತ್ತಾ, ನಿರಾಕರಿಸುತ್ತಾ, ಮೆಚ್ಚುತ್ತಾ, ಮತ್ತೊಂದು ಅಗಾಧವಾದ, ತ್ರಿವಿಕ್ರಮನಂಥ ಅಸ್ಮಿತೆಯನ್ನು ರೂಪಿಸಿಕೊಳ್ಳುವುದು. ಪಂಡಿತ್ ರಾಜೀವ ತಾರಾನಾಥರು ಪ್ರಜ್ಞಾಪೂರ್ವಕವೋ, ಅಪ್ರಜ್ಞಾಪೂರ್ವಕವೋ ಆಯ್ದುಕೊಂಡದ್ದು ಎರಡನೆಯ ದಾರಿಯನ್ನು. ಅವರ ಇಡೀ ಬದುಕು ಇಂತಹ ಔತ್ತಮ್ಯದ ಹುಡುಕಾಟ, ಹುಡುಕಾಟದ ಭಾಗವೇ ಆದ ರಿಯಾಜ್ ಮತ್ತು ಹೀಗೆ ಹುಡುಕಾಡಿದ್ದನ್ನು ಕಾಪಿಟ್ಟು ತಮ್ಮ ಬುದ್ಧಿ ಬೆರಳುಗಳಿಂದ ತಮ್ಮ ಶಿಷ್ಯರ ಬುದ್ಧಿ ಬೆರಳುಗಳಲ್ಲಿ ಹರಿಯುವಂತೆ ಮಾಡುವತ್ತಲೇ ತುಡಿಯುತ್ತಿತ್ತು. ಸಂಗೀತದಲ್ಲಿನ ಈ ಔತ್ತಮ್ಯದ ಹುಡುಕಾಟ ಅವರನ್ನು ಹಲವು ಬಗೆಯ ಸಂಗೀತದ